AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ತೇಜಸ್ವಿ ಕಂಡ : ಪರಿಸರ ಜಗತ್ತು

**ಉಮೇಶ್ ನಾಯ್ಕ್ ಎನ್. ಹುಳಿಯಾರ್**
ಸಂಶೋಧನಾರ್ಥಿ
ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಆವರಣ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056
ಮೊ.ಸಂ. 8867820754
ಇ–ಮೇಲ್ : naiku7187@gmail.com

ತೇಜಸ್ವಿಯವರು ನವ್ಯ ಕಾಲಘಟ್ಟದಲ್ಲಿ ಬರುವ ಲೇಖಕರಲ್ಲಿ ಸ್ವತಂತ್ರ ಪ್ರವೃತ್ತಿಯ ಬರಹಗಾರರು ಹಾಗೂ ಸಮಾಜವಾದಿ ಚಿಂತಕ. ಸಮಾಜದಲ್ಲಿ ತಾಂಡವವಾಡುತ್ತಿದ್ದ ಬಡತನ, ಅಸಮಾನತೆ, ಶೋಷಣೆಯ ಬಗ್ಗೆ ಸಾಹಿತ್ಯದ ಮೂಲಕ ಸದಾ ಧ್ವನಿ ಎತ್ತುತ್ತಿದ್ದ ಅದ್ಭುತ ಲೇಖಕ. ಇಡೀ ಬದುಕಿನ ತುಂಬಾ ರಚಿಸಿದ ಸಾಹಿತ್ಯದಲ್ಲಿ ಕಲೆ, ಸಂಸ್ಕೃತಿ, ಪರಿಸರ ಮತ್ತು ಕೃಷಿಯ ವಿಷಯಗಳನ್ನಷ್ಟೇ ಆಧಾರವಾಗಿಟ್ಟುಕೊಂಡು ಹತ್ತಾರು ಕೃತಿಗಳನ್ನು ರಚಿಸಿದ್ದಾರೆ. ಪಟ್ಟಣ ಜೀವನವನ್ನು ಅಷ್ಟೊಂದು ಇಷ್ಟಪಡದ ತೇಜಸ್ವಿಯವರು ಪರಿಸರದೊಂದಿಗೆ ಬದುಕು ಕಳೆದ ಪರಿಸರ ಪ್ರೇಮಿ. ಇವರು ಬೇರೆ ಲೇಖಕರಿಗಿಂತ ಭಿನ್ನವಾಗಿ ಕಾಣುತ್ತಾರೆ. ಯಾವುದೇ ಕಾಲ್ಪನಿಕ ವಸ್ತು ವಿಷಯವನ್ನು ತಮ್ಮ ಕೃತಿಗಳಲ್ಲಿ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳದೇ ಅವರ ಸುತ್ತಮುತ್ತಲಿನ ದೈನಂದಿನ ಬದುಕಿನಲ್ಲಿ ನೋಡಿದ ವಿಚಾರ ಸಾಹಿತ್ಯದ ಮುಖೇನ ಕುತೂಹಲ ಕೆರಳಿಸುವ ರೀತಿಯಲ್ಲಿ ಕತೆಗಳನ್ನು ಸೃಷ್ಟಿಸಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಕೀರ್ತಿ ತೇಜಸ್ವಿಯವರಿಗೆ ಸಲ್ಲುತ್ತದೆ.

ಪರಿಸರದ ಬಗ್ಗೆ ವೈಜ್ಞಾನಿಕವಾಗಿ ವಿವರಿಸುವುದು ತೇಜಸ್ವಿಯವರ ಬರವಣಿಗೆಯ ವೈಶಿಷ್ಟ್ಯವಾಗಿದೆ. ಹಾಗೆಂದು ಅವರು ವಿಜ್ಞಾನದ ಬರಹಗಾರರಲ್ಲ; ಬದಲಾಗಿ ವೈಜ್ಞಾನಿಕ ಮನೋಧರ್ಮದ ಬರಹಗಾರ. ಕಿರಿಯರಿಂದ ಹಿಡಿದು ಹಿರಿಯರ ತನಕ ಪರಿಸರದ ಬಗೆಗಿನ ತಿಳುವಳಿಕೆಯನ್ನು ಸರಳವಾಗಿ ಮತ್ತು ವೈಜ್ಞಾನಿಕವಾಗಿ ಕಥನದ ರೂಪದಲ್ಲಿ ಆರಂಭದಿಂದಲೂ ರೂಪಿಸುತ್ತಾ ಬಂದಿದ್ದಾರೆ. ತೇಜಸ್ವಿ, ನಾಗೇಶ ಹೆಗಡೆ ಮತ್ತು ಪಿ.ಎಸ್.ವಿವೇಕಾನಂದ ಈ ಮೂವರು ಒಡಗೂಡಿ 'ಕಿರಿಯರಿಗಾಗಿ ಪರಿಸರ' (1990) ಎಂಬುದು ಈ ನಿಟ್ಟಿನಲ್ಲಿ ರಚಿಸಿದ ಮಹತ್ವದ ಪುಸ್ತಕವಾಗಿದೆ. ಇದರಲ್ಲಿ ಪರಿಸರದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡುವಂತೆ ಸರಳವಾದ, ನೇರವಾದ ಭಾಷೆಯ ಮೂಲಕ ವಿವರಿಸುವುದನ್ನು ಕಾಣುತ್ತೇವೆ. ಸೌರಶಕ್ತಿಯ ವಿಶ್ವರೂಪ, ಇಕಲಾಜಿಯ ಸರಪಳಿ, ಪರಿಸರಕ್ಕೆ ತಕ್ಕ ರೂಪ ಬದಲಾವಣೆ, ಮಳೆ ಬರಿಸಲು ಸಾಧ್ಯವೇ? ಆಪರೇಷನ್ ಫ್ಲೇಮಿಂಗೋ ಸರ್ವನಾಶದಿಂದ ಮೇಲಿಂದ ಬಫೆಲೋ ಮುಂತಾದ ವಿಷಯಗಳನ್ನು ಕುರಿತು ಇಲ್ಲಿ ವೈಜ್ಞಾನಿಕವಾಗಿ ಪರಿಚಯಿಸಲಾಗಿದೆ. ಮಕ್ಕಳಿಗಾಗಿ ಬರೆದ ಈ ಪುಸ್ತಕವು ಪರಿಸರದ ಬಗ್ಗೆ ಮಕ್ಕಳಲ್ಲಿ ಹೊಸ ಆಲೋಚನೆಯನ್ನು ಹುಟ್ಟುಹಾಕುವಲ್ಲಿ ಪರಿಣಾಮಕಾರಿಯಾಗಿದೆ.

ಬ್ರಹ್ಮಾಂಡದ ಹಿನ್ನಲೆಯ ಪರಿಸರ, ಜೀವ ವೈವಿಧ್ಯತೆ, ಸೌರಶಕ್ತಿಯ ವಿಶ್ವರೂಪ ಇಂಥ ವಿಭಾಗಗಳ ಬಗ್ಗೆ ಅವರ ಬರಹಗಳನ್ನು ನೋಡಬಹುದು. ಅದರ ಜೊತೆಗೆ ಗಿಡ, ಮರ, ಪ್ರಾಣಿ, ಬಿಸಿಲು, ಮರುಭೂಮಿ ಇವುಗಳ ನಡುವಿನ ಸಂಬಂಧವನ್ನು ಚರ್ಚಿಸುತ್ತಾ, ಪರಿಸರ ವಿಜ್ಞಾನವನ್ನು ಪರಿಚಯ ಮಾಡಿಸುತ್ತಾ, ಮನುಷ್ಯ ಮತ್ತು ಪರಿಸರದ ನಡುವೆ ಹೊಂದಾಣಿಕೆಯ ಮಹತ್ವವನ್ನು ತೇಜಸ್ವಿಯವರ ಕೃತಿಗಳು ಸಾರುತ್ತವೆ. ಈಗಿನ ಆಧುನಿಕ ಬದುಕಿನಲ್ಲಿ ಯಾರ ಕಣ್ಣಿಗೂ ಕಾಣದಿರುವಂತಹ ಮತ್ತು ಯಾವ ವಿಷಯದ ಬಗ್ಗೆ ಆಸಕ್ತಿ ಇಲ್ಲದೆ ಪರಿಸರದಲ್ಲಿರುವ ಜೀವ ವೈವಿಧ್ಯತೆಗಳ ಬಗ್ಗೆ ಅಧ್ಯಯನ ಮಾಡುವುದರಲ್ಲಿ ತುಂಬಾ ನಿಧಾನಗತಿಯಲ್ಲಿ ಸಾಗುತ್ತಿರುವ ಕಾಲಘಟ್ಟದಲ್ಲಿ, ಬದುಕಿನಿಂದ ಹೊರಬಂದು ನೋಡಿದರೆ ಜಗತ್ತು ಎಷ್ಟು ವಿಸ್ಮಯಕಾರಿಯಾಗಿದೆ ಎಂಬುದನ್ನು ತೇಜಸ್ವಿಯವರ ಕೃತಿಗಳ ಮೂಲಕ ತಿಳಿದುಕೊಳ್ಳಬಹುದು.

'ನಿಗೂಢ ಮನುಷ್ಯರು' ಕೃತಿಯಲ್ಲಿ ಸಾಮಾಜಿಕ ಪರಿಸರ ಮತ್ತು ಮನುಷ್ಯನ ಪ್ರಜ್ಞೆ ಇವೆರಡರ ನಡುವಿನ ದ್ವಂದ್ವದಲ್ಲಿ ಗುರುತಿಸುತ್ತಿದ್ದ ಸಂಘರ್ಷವನ್ನು ಇನ್ನೊಂದು ಆಯಾಮದಲ್ಲಿ ನೋಡತೊಡಗುತ್ತಾರೆ. ಇಡೀ ಮನುಕುಲ ಒಂದು ಕಡೆ, ಮತ್ತೊಂದೆಡೆ ಪ್ರಾಕೃತಿಕ ಪರಿಸರ, ತೇಜಸ್ವಿಗೆ ಮನುಷ್ಯನೂ ನಿಗೂಢವೇ, ಪರಿಸರವೂ ನಿಗೂಢವೇ. ಮನುಷ್ಯ ಮತ್ತು ಸಮಾಜ, ಮನುಷ್ಯ ಮತ್ತು ನಿಸರ್ಗ ಇವೆರಡನ್ನು ಅರ್ಥೈಸಿಕೊಳ್ಳಲು ಹೊರಡುವ ದಾರಿ ಅನುಭವ. 'ವ್ಯಕ್ತಿ ವಿಶಿಷ್ಟ ಸಿದ್ಧಾಂತ'ದಲ್ಲಿ ತೇಜಸ್ವಿ ಹೇಳುವಂತೆ ಅನುಭವದಲ್ಲಿ ದೊರಕುವುದಷ್ಟೇ ನಿಜ. ಉಳಿದದ್ದು ಎಷ್ಟೇ ಇದ್ದರೂ ಮನುಷ್ಯನ ಅರಿವಿಗೆ ಬರದಿದ್ದಲ್ಲಿ ಇದ್ದು ಇಲ್ಲದಂತೆ. 'ನಿಗೂಢ ಮನುಷ್ಯರು' ಕೃತಿಯು ಎರಡು ನೆಲೆಯಲ್ಲಿ ನಿಗೂಢತೆಯ ಅರಿವು ಉಂಟಾಗುತ್ತದೆ. ಒಂದು ತನ್ನ ಅನುಭವದೊಡನೆ, ಅದರಿಂದ ಬರುವ ಅರಿವಿನೊಡನೆ ಗುದ್ದಾಡುತ್ತಿರುವ ಗೋಪಾಲಯ್ಯ, ಜಗನ್ನಾಥ ಯಾವುದರ ಗೊಂದಲವಿಲ್ಲದೆ ಬರಿಯ ಹೊಟ್ಟೆಪಾಡಿಗಾಗಿ ಬದುಕುತ್ತಿರುವ ಮರಸರ, ಕುಳಪ ಮುಂತಾದವರ ಬದುಕು. ಇನ್ನೊಂದು ತಾನು ಪಡೆದುಕೊಂಡಿರುವ ಅರಿವಿನಿಂದ ಉಗ್ರಗಿರಿಯನ್ನು, ಬಿರುಗಾಳಿಯನ್ನು, ಮಳೆಯನ್ನು, ಅನಿರೀಕ್ಷಿತವಾದ ಭೂಕಂಪನವನ್ನು ಅಥ–ರ್ಮಾಡಿಕೊಳ್ಳಲು ಹವಣಿಸಿ ಸೋಲುತ್ತಿರುವ ಮನುಷ್ಯ. ಅನುಭವದಿಂದ ದೊರಕುವ ಮನುಷ್ಯನ ಅರಿವು, ಸುತ್ತಲಿನ ಸಮಾಜದ ವಿಶ್ಲೇಷಣೆಯಲ್ಲಿ ತೊಡಗಿಕೊಂಡಿದ್ದದ್ದು ಕ್ರಮೇಣ ಈ ಕೃತಿಯಲ್ಲಿ ಮನುಷ್ಯನನ್ನು ಒಳಗೊಂಡಂತೆ ಅವನ ಅಸ್ತಿತ್ವ ಮತ್ತು ಅವನ ಹೊರಗಿನ ಮೂರ್ತ ಜಗತ್ತು ಇವೆರಡರ ಮುಖಾಮುಖಿಯ ನಿಗೂಢತೆಯನ್ನು ಅರ್ಥೈಸಿಕೊಳ್ಳುವ ಹಂತಕ್ಕೆ ತೇಜಸ್ವಿ ಬದಲಾಗುತ್ತಾರೆ.

ಅಕಸ್ಮಾತಾಗಿ ಪರಿಚಯವಾದ 'ಮಂದಣ್ಣ' ಎಂಬ ಹಳ್ಳಿಗನ ಬದುಕು ಮತ್ತು ಅವನಲ್ಲಿ ಹುದುಗಿರುವ ಪ್ರತಿಭೆ 'ಕರ್ವಾಲೋ' ಕಾದಂಬರಿಯ ತಳಪಾಯ. ಇವನ ಗೆಳೆತನದಿಂದ ಮತ್ತು ಕರ್ವಾಲೋ ಅವರ ಮಾರ್ಗದರ್ಶನದಿಂದ ತೇಜಸ್ವಿಯವರು ಅರಣ್ಯ ಮಧ್ಯದ ಜೀವರಾಶಿಯ ನಿಗೂಢ ಬದುಕನ್ನು ತಿಳಿದುಕೊಂಡು ವ್ಯಕ್ತಪಡಿಸುತ್ತಾರೆ. ಜೇನುತುಪ್ಪದ ಪ್ರಕರಣ, ಜೇನು ಹುಳುಗಳ ದಾಳಿ, ಕಿವಿಯ ಬೇಟೆಯ ಉತ್ಸಾಹ, ಜನಪದ ವೈದ್ಯ, ಜೇನು ಸಾಕಾಣಿಕೆ ಇತ್ಯಾದಿ ವ್ಯವಹಾರವನ್ನು ಕಾದಂಬರಿಯಲ್ಲಿ ಲೇಖಕರು ಹಿಡಿದಿಟ್ಟಿದ್ದಾರೆ.

ಸುತ್ತಲಿನ ಪರಿಸರದ ಜಡತ್ವ, ಉತ್ಸಾಹ ರಹಿತ ವಾತಾವರಣದಲ್ಲಿ ಮುಳುಗಿ ಹೋಗುತ್ತಿರುವ 'ಕರ್ವಾಲೋ'ದ ನಿರೂಪಕ ಮೊದಲು ಕಾಡು ಕೊಂಡು ವ್ಯವಸಾಯ ಆರಂಭಿಸಿದ ಉತ್ಸಾಹ ಉಳಿಸಿಕೊಳ್ಳಲಾಗುತ್ತಿಲ್ಲ. ಸಾಮಾಜಿಕ ಪರಿಸರ ಅವನನ್ನು ಯಾವ ರೀತಿಯಲ್ಲಿ ದಡ್ಡನಾಗಿಸುತ್ತದೆ

ಎಂಬುದನ್ನು ನಿರೂಪಕನ ಮಾತಿನಲ್ಲಿ ಹೇಳುವುದಾದರೆ "ನಾನು ನನ್ನ ತೋಟ ಮಾರಿ ಬೇರೇನಾದರೂ ಮಾಡಬೇಕೆಂದು ನಿರ್ಧರಿಸಿದ್ದೆ. ಮೊದಲನೆದಾಗಿ ವ್ಯವಸಾಯದಿಂದ ಲಾಭ ಬರುವುದೆಂಬ ನಂಬಿಕೆ ನನ್ನೊಳಗೆ ನಶಿಸತೊಡಗಿತ್ತು. ಲಾಭ ಮಾಡುವುದಿರಲಿ ಬ್ಯಾಂಕಿನಲ್ಲಿ ಮಾಡಿಕೊಂಡ ಸಾಲದ ಬಡ್ಡಿ ಹೆಚ್ಚುಕಡಿಮೆ ಅಧಿಕಾರಶಾಹಿಯ ಜೀತದಾಳಾಗಿ ನಾನೂ ನನ್ನಂಥ ಅನೇಕ ರೈತರೂ ಪರಿವರ್ತಿತರಾಗಿದ್ದರು. ಹಾಕಿದ ಲೆಕ್ಕಾಚಾರ ಒಂದೂ ಗುರಿ ತಲುಪುತ್ತಲೇ ಇರಲಿಲ್ಲ. ಅಕಸ್ಮಾತ್ ಕೊಂಚ ಕರಾರುವಕ್ಕಾಗಿ ಬೆಳೆ ಬಂದರೂ ಆ ವೇಳೆಗಾಗಲೇ ಹಣದುಬ್ಬರ. ಏರಿದ ಸಾಮಾನಿನ ಬೆಲೆಗಳು ವಿಷದಂತೆ ಏರುತ್ತಿದ್ದ ಬ್ಯಾಂಕ್ ಬಡ್ಡಿದರ ಅದನ್ನು ಕಬಳಿಸಿ ಬಿಡುತ್ತಿದ್ದವು. ಹೀಗಾಗಿ ಸದಾ ಮುಂದೆ ಸಿಕ್ಕುವ ಲಾಭದ ಮರೀಚಿಕೆಯ ಹಿಂದೆ ಆರ್ಥಿಕ ಬಿಕ್ಕಟ್ಟಿನ ಮರಳುಗಾಡಿನಲ್ಲಿ ಸಾಗುತ್ತಿದ್ದೆ" ಇಂತಹ ಪರಿಸ್ಥಿತಿಯು ನಿರೂಪಕನಲ್ಲಿ ಹುಟ್ಟಿಸುತ್ತಿರುವ ಭಾವನೆ. ಇದರೊಡನೆ ಕಾಡಿನ ಮೌನ, ಏಕಾಂತ, ಗ್ರಾಮಜೀವನದ ಕಾರ್ಪಣ್ಯಗಳು, ಪೇಟೆಯ ಗಲೀಜು, ಹೊಗೆ, ಜನಜಂಗುಳಿಗಳಂತೆಯೇ ಏಕತಾನವಾಗಿ ಬೇಸರ ತರತೊಡಗಿದ್ದವು. ಕಾಡು ಮೊದಲಿನಂತೆ ಗೌಪ್ಯ, ಕುತೂಹಲ, ರಹಸ್ಯಗಳನ್ನು ಕೆರಳಿಸಿದೆ ಜಡವಸ್ತುವಿನ ಕಾಣತೊಡಗಿತು. ನನ್ನೊಳಗೇ ನಾನು ಮುಳುಗಿ ಹೋದೆ. ಆದ್ದರಿಂದ ಈ ತೋಟವನ್ನೊಮ್ಮೆ ಮಾರಿದರೆ ಈ ನಿರುತ್ಸಾಹದ ಶರಧಿಯನ್ನು ದಾಟಿದಂತೆಯೇ ಎಂಬ ನಿರ್ಧಾರಕ್ಕೆ ಬಂದಿದೆ. ಇಂತಹ ನಿರುತ್ಸಾಹದಾಯದ ವಾತಾವರಣವನ್ನು ತ್ಯಜಿಸಿ ಹೊರಟು ಹೋಗಲು ನಿರ್ಧರಿಸುತ್ತಾರೆ. ಅಂತಹ ಸಂದರ್ಭದಲ್ಲಿ ನಿರೂಪಕನ ಬದುಕಿನಲ್ಲಿ ಪ್ರವೇಶಿಸುವ ಕರ್ವಾಲೋ ನಿರೂಪಕನಲ್ಲಿ ನಿರುತ್ಸಾಹವನ್ನು ಹೊಡೆದೋಡಿಸುವಂತಹ ಕುತೂಹಲವನ್ನು ಸುತ್ತಲಿನ ಪರಿಸರದಲ್ಲಿ ಮೂಡಿಸುತ್ತಾರೆ.

ಜೇನು, ಮಂದಣ್ಣ, ನಾರ್ವೆ ರಾಮಯ್ಯ, ದೀಪ ಬಿಟ್ಟುಕೊಂಡು ಓಡಾಡುವ ಹುಳು ಎಲ್ಲವೂ ಕುತೂಹಲದ ಆಗರವಾಗುತ್ತದೆ. ಬದುಕಿನ ಉತ್ಸಾಹ ನೋಡುವ ದೃಷ್ಟಿಕೋನದಲ್ಲಿದೆಯೇ ಹೊರತು, ಸಾಮಾಜಿಕ ಪರಿಸರ ಹೇರುವ ಒತ್ತಡದಲ್ಲಿ ರೂಪಿತಗೊಳ್ಳುವ ಬದುಕಿನಲ್ಲಿ ಅಲ್ಲ ಎಂಬುದನ್ನು ಕರ್ವಾಲೋ ನಿರೂಪಕರಲ್ಲಿ ಮೂಡಿಸುತ್ತಾರೆ. ಒಂದು ಸೊಡರು ಮತ್ತೊಂದು ಸೊಡರನ್ನು ಬೆಳಗುವಂತೆ ಕರ್ವಾಲೋ ನಿರೂಪಕನಿಗೆ ಕಣ್ಣು ಬಿಟ್ಟು ನೋಡುವುದನ್ನು ಕಲಿಸುತ್ತಾರೆ.

ಮನುಷ್ಯ ಪ್ರಜ್ಞೆ, ಸಾಮಾಜಿಕ ಪರಿಸರದ ಪರದೆಯೊಳಗೆ ಸಿಕ್ಕಿ ಬೀಳದೆ, ಸೂರಾಚಾರಿ ಅಂತೆ ನನ್ನ ಸೃಜನಶೀಲತೆಯನ್ನು ಮುಕ್ಕಾಗಿಸಿಕೊಳ್ಳದೆ, ಬೋಬಣ್ಣನಂತೆ ಊರು ಬಿಟ್ಟು ಓಡಿಹೋಗಿದೆ ಆಗಿರುವ ಸ್ಥಿತಿಯೊಳಗೆ ಹೊಸತನ್ನು ಕಾಣುವ ಶಕ್ತಿ ಬೆಳೆಸಿಕೊಳ್ಳುತ್ತದೆ. ಕುತೂಹಲಗಳು ಮನುಷ್ಯ ಪ್ರಪಂಚವನ್ನು ಒಳಗೊಂಡಂತೆ, ಸುತ್ತಲಿನ ನಿಸರ್ಗವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಹಿಂದೆ 'ನಿಗೂಢ ಮನುಷ್ಯ'ರಲ್ಲಿ ಅತ್ಯಂತ ವಿಚಿತ್ರವಾಗಿ ಕಾಣುತ್ತಿದ್ದ ಮರಸರ, ಕುಳುಪನಂತಹ ಮಂದಣ್ಣ ನಾರ್ವೇ ರಾಮಯ್ಯ ಇವರೆಲ್ಲರ ಬದುಕು ಹೊಸದೃಷ್ಟಿಯೊಡನೆ ಕಾಣತೊಡಗುತ್ತದೆ. ಅವರೊಳಗಿನ ವಿಶಿಷ್ಟ ಶಕ್ತಿಯನ್ನು ಕಾಣುವ ಕಣ್ಣು ತೆರೆಯುತ್ತದೆ. ಈ ಹಿನ್ನೆಲೆಯಲ್ಲಿ ಪರಿಸರವೇ ರೂಪಿಸಿ ಕೊಡುತ್ತಿದ್ದ ಗ್ರಹಿಕೆಯನ್ನು ಮೀರಿ ವ್ಯಕ್ತಿ ಪ್ರಜ್ಞೆ ತನ್ನ ಬೆಳವಣಿಗೆಯನ್ನು ರೂಪಿಸಿಕೊಳ್ಳುತ್ತದೆ.

'ಕೃಷ್ಣೇಗೌಡನ ಆನೆ' ಎಂಬ ದೀರ್ಘ ಗದ್ಯವನ್ನು ಅಧ್ಯಯನ ಮಾಡುತ್ತಾ ಹೋದಂತೆ ಅದರ ಒಳಗಿನ ಪ್ರಾಣಿಯ ಅಸಹಾಯಕತೆ ಕಂಡು ಬರುತ್ತದೆ. ಅದೊಂದು ಮಲೆನಾಡು ಪ್ರದೇಶ, ಕಾಡುದಾರಿ ಒಳಗೆ ವಿದ್ಯುತ್ ಕಂಬಗಳು ಹಾದು ಹೋಗುವುದರಿಂದ ಸಹಜವಾಗಿಯೇ ಆಗಾಗಿ ಕರೆಂಟು ಕೈ ಕೊಡುತ್ತದೆ. ಇಂತಹ ಸಂದರ್ಭ ವಿದ್ಯುತ್ ಇಲಾಖೆಯು  ಜನರ ಗುರಿಯಾಗುವುದು ಹೆಚ್ಚು. ಲೈನ್ ರಿಪೇರಿಗೆ ಬರುವ ವ್ಯಕ್ತಿ ತಮ್ಮ ಇಲಾಖೆಯ ದೋಷಗಳನ್ನು ಮುಚ್ಚಿ ಹಾಕಲು ಕೃಷ್ಣೇಗೌಡನ ಆನೆಯನ್ನು ಆರೋಪಿಸುತ್ತಾನೆ. ಜನರು ಕೂಡ ಒಪ್ಪುವಂತೆ ಮಾಡುತ್ತಾರೆ, ಹೀಗೆ ಊರಲ್ಲಿ ಯಾವುದೇ ದುರಂತ ನಡೆದರೂ ಆನೆಯನ್ನು ದೂರುವುದು ವಿಪರ್ಯಾಸದ ಸಂಗತಿ ಎಂತಲೇ ಹೇಳಬಹುದು. ಟೆಲಿಫೋನ್ ರಿಪೇರಿ ಮಾಡುತ್ತಿದ್ದ ಸಿಬ್ಬಂದಿ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಾಗ, ರಾತ್ರಿ ಮರ ಸಾಗಿಸುವ ಲಾರಿಯೊಂದು ಅಪಘಾತಗೊಂಡ ಚಾಲಕ ಮೃತಪಟ್ಟಾಗ, ಅಂಗಡಿಯೊಂದು ಕಿಡಿಗೇಡಿತನಕ್ಕೆ ಹಾನಿಗೊಂಡಾಗ ಅವುಗಳನ್ನು ಮೂಕಪ್ರಾಣಿ ಆನೆಯ ಮೇಲೆ ಅಪವಾದ ಹೊರಿಸಲಾಗುತ್ತದೆ. ಆನೆಯಂತೆ ಅಷ್ಟೇ ಸಹಜವಾಗಿ ಬದುಕುವ ಮಾವುತ ವೇಲಾಯುಧನ ದುರಂತವು ಇಲ್ಲಿ ಮನುಕುಲದ ದುರಂತ ಎಂದು ಹೇಳಬಹುದು. ಮಾವುತ ಮತ್ತು ಆನೆಯ ಪಾತ್ರಗಳು ಸಹಜ ಬದುಕಿನ ತಲ್ಲಣವನ್ನು ಚಿತ್ರಿಸುತ್ತದೆ. ಮನುಕುಲದ ಎಲ್ಲಾ ದುರಂತ ಮಾನವ ನಿರ್ಮಿತವಾದರೂ ಅದನ್ನು ಒಪ್ಪಿಕೊಳ್ಳಲಾಗದ ಮನಸ್ಥಿತಿ, ದುರಾಂಕಾರ ಕೊನೆಗೊಂದು ದಿನ ಮಾನವ ಕುಲವನ್ನೇ ಅಂತ್ಯಗೊಳಿಸುತ್ತದೆ ಎನ್ನುವ ಸಂದೇಶ ಸಾರುವ ಕತೆಯಾಗಿದೆ. ಸಮಾಜದ ಅಂಕುಡೊಂಕುಗಳನ್ನು ಸಹಜತೆಗೆ ಹತ್ತಿರವಾಗಿ ಚಿತ್ರಿಸಲಾದ ಬಗೆ ಮನೋವೈಜ್ಞಾನಿಕವಾಗಿದೆ. ಪರಿಸರದ ಮೇಲಿನ ಮಾನವನ ದೌರ್ಜನ್ಯವನ್ನ ತೋರಿಸುತ್ತದೆ.

'ಪೆದ್ದು ಚೆರುವಿನ ರಾಕ್ಷಸ–2'(1993) ಕಾಡಿನ ಕಥೆಗಳು ಸರಣಿಯಲ್ಲಿ ಕನ್ನಡಕ್ಕೆ ಭಾವಂತರವಾಗಿ ಬಂದ ಮತ್ತೊಂದು ಕೃತಿಯಾಗಿದೆ. ಇದರಲ್ಲಿ 'ಪೆದ್ದು ಚೆರುವಿನ ರಾಕ್ಷಸ, ತಳವಾಡಿಯ ಮೂಕ ರಾಕ್ಷಸ, ಲಕ್ಕವಳ್ಳಿಯ ಹೆಬ್ಬುಲಿ' ಎಂಬ ಮೂರು ಬೇಟೆಯ ಕಥೆಗಳಿವೆ. ಆಂಧ್ರಪ್ರದೇಶದ ಅತ್ಯಂತ ವಿವಿಧ ಅರಣ್ಯ ಪ್ರದೇಶದಲ್ಲಿ ಹುಲಿ ಸುತ್ತಮುತ್ತಲ ದನ ಕುರಿ ಮೇಕೆಗಳನ್ನು ಹಿಡಿಯುತ್ತಿತ್ತು. ದನಗಳ ರಕ್ಷಣೆಗೆ ಮನುಷ್ಯ ಧಾವಿಸಿದಾಗ ಅವನು ಹುಲಿಯನ್ನು ಹೊಡೆದು ಎದುರಿಸಿ ಓಡಿಸಲು ಅಥವಾ ಕೊಲ್ಲಲು ಯತ್ನಿಸುತ್ತಾನೆ. ಆಗ ಗಾಯಗೊಂಡ ಪ್ರಾಣಿಗಳು, ಕಾಡಿನ ಮೃಗಗಳು ಶಿಕಾರಿ ಮಾಡಲು ಶುರು ಮಾಡುತ್ತವೆ. ನರಭಕ್ಷಕಗಳ ಮೂಲ ಇದೆ. ಒಮ್ಮೆ ಮನುಷ್ಯನ ರಕ್ತದ ರುಚಿ ಹಿಡಿದ ಯಾವುದೇ ಪ್ರಾಣಿ ಆನಂತರ ಬೇರೊಂದನ್ನು ಬಯಸುವುದೇ ಇಲ್ಲ. ಈ ಅರಣ್ಯಗಳಲ್ಲೂ ಬೇರೆಡೆಗಳಂತೆ ಇದೇ ರೀತಿ ನರಭಕ್ಷಕ ಹುಲಿಗಳೂ, ಚಿರತೆಗಳು ಆಗಾಗ ರೂಪುಗೊಳ್ಳತೊಡಗಿದ್ದವು. ರೈಲ್ವೆ ಲೈನಿನ ಅಕ್ಕ–ಪಕ್ಕ ಓಡಾಡುವವರನ್ನೂ, ಲೈನ್‌ಮೆನ್‌ಗಳನ್ನೂ, ಮಹಿಳೆಯರನ್ನೂ ನರಭಕ್ಷಕ ಹುಲಿಗಳು ಹಿಡಿದು ತಿನ್ನ ತೊಡಗಿದ್ದನ್ನು ಅಂಡರ್ಸನ್ ಕೇಳಿ ಅಲ್ಲಿಗೆ ಅದನ್ನು ಕೊಲ್ಲಲು ಹೋಗುತ್ತಾರೆ. ಅಲ್ಲಿಗೆ ಹೋಗಿ ಅಲ್ಲಿಯ ಬಾಯಣ್ಣನೆಂಬ ವ್ಯಕ್ತಿಯ ಸ್ನೇಹ ಆತಿಥ್ಯ ಸ್ವೀಕರಿಸಿ, ಅಲ್ಲಿಯ ಅಪ್ಪು ಹಾಗೂ ಅಪಿಯಪ್ಪನ ನೆರವಿನಿಂದ ಸಾಹಸ ಮಾಡಿ ಆ ಹುಲಿಯನ್ನು ಕೊಂದು ಜನಗಳಲಿದ್ದ ಭೀತಿಯನ್ನು ನಿವಾರಿಸುತ್ತಾರೆ.

ಇಂತಹದೇ ಇನ್ನೊಂದು ನರಭಕ್ಷಕ ರಾಕ್ಷಸ ಹುಲಿಯ ವೃತ್ತಿಗೆ ಸಂಬಂಧಿಸಿದ್ದೇನೆಂದರೆ ತಾಳವಾಡಿಯ ಮೂಕ ರಾಕ್ಷಸನ ಪ್ರಸಂಗ. ಇದು ಕೊಯಮತ್ತೂರು ಜಿಲ್ಲೆಯ ಮೊಯರ್ ಕಣಿವೆಯಲ್ಲಿ ನೀಲಗಿರಿಗೆ ಹತ್ತಿರದಲ್ಲಿದ್ದ ತಾಳವಾಡಿ ಎಂಬ ಹಳ್ಳಿಯ ಬಳಿ ಇದ್ದ ಒಬ್ಬ ತೋಟದ ಮಾಲೀಕನ ಕಥೆ. ಇವನ ಹೆಸರು ಹುಗ್ಗ ಅಂಥ. ಸೀತಾ ಅಂಡರ್ಸನ್ ಓದಿದ ಸ್ಕೂಲಿನಲ್ಲೇ ಓದಿದವ ಮತ್ತು ಬುದ್ಧಿವಂತ. ಗೀತಾ ಭಾರತದಲ್ಲಿ

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಎಲ್ಲೋ ಬೆಳೆಯುತ್ತಿದ್ದ ಒಂದು ಬಗೆಯ ಹುಲ್ಲನ್ನು ಸಂಶೋಧನೆ ಮಾಡಿದ್ದ. ಈತ ಆನೆಗಳನ್ನು, ನರಭಕ್ಷಕ ಹುಲಿಗಳ ಕಾಟ ತಡೆಯಲಾರದೆ ಮುಂದೊಂದು ದಿನ ತನ್ನ ನೋಟವನ್ನು ಮಾರಿ ಇಂಗ್ಲೆಂಡಿಗೆ ಹೊರಟು ಹೋಗಿ, ಅಲ್ಲೇ ಹೃದಯಾಘಾತದಿಂದ ತೀರಿಕೊಳ್ಳುತ್ತಾನೆ. ಅಂತಹ ಹುಲಿಯನ್ನು ಆಂಡರ್ಸನ್ ಕೊಲ್ಲಲು ನಡೆಸುವ ಅನೇಕ ತಂತ್ರಗಳು ಇಲ್ಲಿವೆ. ಹಾಗೆಯೇ ಮೈಸೂರು ಜಿಲ್ಲೆಯ ಪಶ್ಚಿಮಕ್ಕಿರುವ ತರೀಕೆರೆ ಹತ್ತಿರದ ಲಕ್ಕವಳಿಯ ಸುತ್ತಮುತ್ತ ಇದ್ದ ಕಾಡುಗಳಿಂದ ಜನರಿಗೆ ತೊಂದರೆ ಕಾಡುತ್ತಿದ್ದ 'ಲಕ್ಕವಳ್ಳಿಯ ಹೆಬ್ಬುಲಿ'ಯನ್ನು ಅಂದರೆ ಕೆಮ್ಮಣ್ಣಗುಂಡಿಯ ನರಭಕ್ಷಕ ಹುಲಿಯನ್ನು ಆಂಡರ್ಸನ್ ಶಿಕಾರಿ ಮಾಡಿ ಕೊಲ್ಲುವ ಕತೆಯೂ ತುಂಬಾ ಭೀಕರವಾಗಿ ವರ್ಣಿತವಾಗಿದೆ.

ನಮ್ಮ ಸುತ್ತಮುತ್ತಲಿನ ಪರಿಸರ ವ್ಯಾಪಾರಗಳಲ್ಲಿ ಇಂದಿಗೂ ಅದೆಷ್ಟೋ ವಿವರಗಳನ್ನು ನಾವಿನ್ನು ಪೂರ್ತಿಯಾಗಿ ಅರಿತಿಲ್ಲವೆಂದು ತೇಜಸ್ವಿಯವರು ಪರಿಸರದ ಕಥೆಯನ್ನು ಬರೆಯಬೇಕಾದರೆ ಹೇಳುತ್ತಾರೆ. 'ಪರಿಸರದ ಕಥೆ'ಯಲ್ಲಿ ಬರುವ 'ಮೂಲಿಕೆ ಬಳ್ಳಿಯ ಸುತ್ತ'ದಲ್ಲಿ ಲೇಖಕರು ಅಚ್ಚರಿಯಿಂದ ದಾಖಲಿಸುವ ವಿವರಗಳು, ಆ ಬಳ್ಳಿಯ ರಹಸ್ಯಮಯ ಅಸ್ತಿತ್ವವನ್ನು ಮತ್ತು ಹಳ್ಳಿಯವರು ಬಳ್ಳಿಯ ಸುತ್ತಲೂ ಹಬ್ಬಿಸಿರುವ ಊಹಾಪೋಹಗಳ ಕೋಟೆಯನ್ನೇ ಬಿಚ್ಚಿಡುತ್ತದೆ. ವೈದ್ಯರು ವಾಸಿ ಮಾಡಲಾಗದ ರೋಗಗಳನ್ನು ಮೂಲಿಕೆಗಳು ವಾಸಿ ಮಾಡುತ್ತದೆ ಎಂಬ ಹಳ್ಳಿ ಜನರ ಮೂಢನಂಬಿಕೆಯೋ ಅಥವಾ ನಂಬಿಕೆಯೋ ಒಂದೆಡೆಯಾದರೆ, ಮೂಲಿಕೆ ಬಳ್ಳಿಯಿಂದ ಹಲವು ರೋಗಗಳು ನಿಜಕ್ಕೂ ವಾಸಿಯಾಗುವ ವಾಸ್ತವಗಳು ಇನ್ನೊಂದೆಡೆ! ಅದರ ಗಡ್ಡೆಯ ಚೂರನ್ನು ಕುತೂಹಲಕ್ಕೆಂದು ಲೇಖಕರು ತಿಂದರಂತೆ. ಅದರಿಂದ ಆದ ಪರಿಣಾಮ ಅವರಿಗೆ ಅಚ್ಚರಿ ತಂದಿತು ಬಲಗಾಲು ಹಿಮ್ಮಡಿ ಅನೇಕ ದಿನಗಳಿಂದ ಲೇಖಕರಿಗೆ ನೋಯುತ್ತಿತ್ತು. ನಂತರ ಇದರ ಪರಿಣಾಮದಿಂದ ವಾಸಿ ಆಯಿತಂತೆ. ಹೀಗೆ ಗಿಡಮೂಲಿಕೆಗಳು ದೇಹದ ಆರೋಗ್ಯಕ್ಕೆ ಔಷಧಿಗಳಾಗಿವೆ ಎಂದು ಹೇಳುತ್ತಾ ಹೊಸ ರೀತಿಯ ಆಯುರ್ವೇದದ ಗೆಡ್ಡೆಗಳ ಶೋಧನೆಗಾಗಿ ಓದುಗರಿಗೆ ಪ್ರಚೋದಿಸುವಂತೆ ಕಾರ್ಯವನ್ನು ಈ ಕಥೆಯಲ್ಲಿ ಲೇಖಕರು ಮಾಡುತ್ತಾರೆ.

ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕತೆಗಳು (1993) ಇದರಲ್ಲಿ ಏರೋಪ್ಲೇನ್ ಚಿಟ್ಟೆ, ಒಂಟೆ, ಹುಳು, ಬಾವಲಿ, ಕೀಟ ಶಿಲ್ಪಿಗಳು, ಚೀಂಕ್ರ ಮತ್ತು ಅರಿಸ್ಟಾಟಲ್, ಹಾವು ಮೀನಿನ ಪ್ರಚಂಡ ಯಾನ, ಅಕ್ಕಮ್ಮ ಹೇಳಿದ ಕಥೆ, ಹಲ್ಲಿಯ ತ್ರಾಣ ಬಾಲದಲ್ಲಿ, ಮಲಬಾರ್ ಟ್ರೋಜನ್, ನಾವು ಕೊಂದ ಹಕ್ಕಿ, ಒಡಲ ನೂಲಿನಿಂದ, ಹಕ್ಕಿಗಳ ಹೆಜ್ಜೆ ಮೂಡಿದ ಹಾದಿ– ಹೀಗೆ ಮುಂತಾದ ಒಟ್ಟು ಹದಿನೇಳು ಕಥೆಗಳು ಚಿತ್ರಸಹಿತ ಈ ಸಂಕಲನದಲ್ಲಿದೆ. ಈ ಎಲ್ಲ ಕಥೆಗಳು ಮೂಡಿಗೆರೆಯ ಪರಿಸರದ ಕಾಡಿನಲ್ಲಿ ರೂಪಗೊಂಡಿದೆ. ಇಲ್ಲಿ ತೇಜಸ್ವಿಯವರು ತಮ್ಮ ಸ್ವ–ಅನುಭವವನ್ನು ಕತೆಯ ರೂಪದಲ್ಲಿ ನಿರೂಪಿಸುತ್ತಿದ್ದರೂ ಅವರು ತಮ್ಮ ಸ್ವ ಅನುಭವವನ್ನು ಅವುಗಳ ಬಗ್ಗೆ ಈಗಾಗಲೇ ಆಯಾ ಕ್ಷೇತ್ರದಲ್ಲಿ ನಡೆದಿರುವ ವೈಜ್ಞಾನಿಕ ಚಿಂತನೆಗಳನ್ನು ಮತ್ತು ಪ್ರಯೋಗಗಳನ್ನು ಸಹ ನೆನಪಿಸುತ್ತಾರೆ. ಕಾಲಾಂತರದಲ್ಲಿ ಜೀವಚರಗಳ ಬೆಳವಣಿಗೆಯಲ್ಲಿ ಆದ ಬದಲಾವಣೆಗಳನ್ನು ಅವುಗಳ ಬದುಕಿನ ರೀತಿ, ಸ್ಥಳ, ಪರಿಸರ ಎಲ್ಲವನ್ನೂ ಕುರಿತು ವಿಜ್ಞಾನಿಗಳು ನಡೆಸಿರುವ ಅಧ್ಯಯನವನ್ನು ವಿವರಿಸುತ್ತಾರೆ. ತಮ್ಮ ಪರಿಸರದಲ್ಲಿ ತಾವೂ ಕಂಡ ಆ ಕೀಟ, ಪಕ್ಷಿ ಪ್ರಾಣಿಗಳ ಜೀವನಕ್ರಮವನ್ನು ಮಕ್ಕಳಿಗೆ ಮನದಟ್ಟಾಗುವ ರೀತಿಯಲ್ಲಿ ಸೂಕ್ಷ್ಮವಾಗಿ ವಿವರಿಸುತ್ತಾರೆ. ಸೂಪರ್ ಕಂಪ್ಯೂಟರ್ ಭಾವನೆಗಳ ಮೇಲೆ ವಿಜ್ಞಾನಿಗಳಿಂದ ನಡೆದಿರುವ ಪ್ರಯೋಗಗಳನ್ನು ಹೇಳುತ್ತಾ, ಅವುಗಳ ಶಬ್ದ ತರಂಗಗಳನ್ನು ಪತ್ತೆ ಮಾಡಲು ವಿಜ್ಞಾನಿಗಳು ಪಟ್ಟ ಪಾಡು ಇಲ್ಲಿದೆ. ಆಕಾಶದಲ್ಲಿ ಹಾರಾಡುವ ಚಿಟ್ಟೆಗಳ ಬಗ್ಗೆ, ಭಾವನೆಗಳ ಬಗ್ಗೆ ವಿಜ್ಞಾನಿಗಳಿಗೆ ಅರ್ಥವಾಗದೆ ಅವರು ತೊಳಲಾಡುತ್ತಿದ್ದ ರೀತಿಯನ್ನು ಸ್ವಾರಸ್ಯಕರವಾಗಿ ಮತ್ತು ಕುತೂಹಲಕರವಾಗಿ ತೇಜಸ್ವಿ ನಿರೂಪಿಸಿದ್ದಾರೆ.

ಹಾವಿನ ಮೂಗಿನ ಕೆಳಗೆ ಇರುವ ಎರಡು ರಂದ್ರಗಳನ್ನು ವಿಜ್ಞಾನಿಗಳು ಕಾಲಾಂತರದಲ್ಲಿ ಹೇಗೆ ಕಂಡು ಹಿಡಿದರು. 'ಹಾವಿನ ಎರಡನೆಯ ಮೂಗು; ಮೂಗು ಅಲ್ಲ, ಕಣ್ಣು ಅಲ್ಲ; ಅದೊಂದು ರಹಸ್ಯವಾದ ಮೂರನೆಯ ಇಂದ್ರಿಯ' ಎನ್ನುವುದನ್ನು ಕೊನೆಗೂ ವಿಜ್ಞಾನಿಗಳು ಪತ್ತೆ ಹಚ್ಚಿದ್ದನ್ನು ತಿಳಿಸಿಕೊಡುತ್ತಾರೆ. ಹಾವು ಮೀನುಗಳ ಸಂತತಿ ನಾಶದ ಬಗ್ಗೆ ಮತ್ತು ಅವುಗಳ ವಲಸೆಯ ಬಗ್ಗೆ ವಿಷಾದದಿಂದ ಲೇಖಕರು ವಿವರಿಸಿದ್ದನ್ನು ನೋಡುತ್ತೇವೆ. ಹಾಗೆಯೇ ವಲಸೆ ಹೋಗುವ ಹಕ್ಕಿಗಳ ಬಗ್ಗೆ ವಿಜ್ಞಾನಿಗಳು ನಡೆಸಿದ ಪ್ರಯೋಗಗಳನ್ನು ಪರಿಚಯ ಮಾಡಿಕೊಡುತ್ತಾರೆ. ಸ್ಥಳೀಯ ವ್ಯಕ್ತಿಗಳು ತಮ್ಮ ಪರಿಸರದ ಜೀವಿಗಳನ್ನು ವಿವರಿಸುವಾಗ ಅವುಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸಿರುತ್ತಾರೆಂದು ತೇಜಸ್ವಿಯವರು ಚೀಂಕ್ರ ಮೇಸ್ತ್ರಿ ಕಥೆಯಲ್ಲಿ ನಿರೂಪಿಸಿದ್ದಾರೆ. ಈ ವನ್ಯಜೀವಿಗಳು, ಕ್ರಿಮಿಕೀಟ, ಪಕ್ಷಿಗಳು, ಹೊಳೆ ನದಿಗಳ ನಡುವೆ ಇನ್ನೊಂದು ಜೀವಿಯಾದ ಮಾನವನ ಸಾಮಾಜಿಕ ಸ್ಥಿತಿಗತಿಯ ಕಡೆಗೂ ಲೇಖಕರು ಲಕ್ಷ್ಯ ಹರಿಸಿರುವುದನ್ನು ನೋಡುತ್ತೇವೆ. ಸಿದ್ದೇಗೌಡರ ಶ್ರೀಮತಿಗೆ ಬಗ್ಗೆ ಹಬ್ಬಿರುವ ವದಂತಿಗಳನ್ನು ಲೇಖಕರು ಅಕ್ಕಮ್ಮನಿಂದ ಸಂಗ್ರಹಿಸಿ ಹೇಳುವುದರ ಮೂಲಕ ಮಾನವನ ಸಾಮಾಜಿಕ ಸ್ಥಿತಿಯನ್ನು ಬಿಂಬಿಸುತ್ತಾರೆ. ಇದು ತೇಜಸ್ವಿಯವರ ಒಂದು ತಾತ್ವಿಕತೆಯಾಗಿದೆ ಎನ್ನಬಹುದು.

ನಿಸರ್ಗದಲ್ಲಿ ಇನ್ನೂ ಎಷ್ಟೋ ಗುರುತಿಸಲಾಗದ ಜೀವಜಾಲದಲ್ಲಿದೆ. ಅವುಗಳನ್ನು ಗುರುತಿಸುವ ಕುತೂಹಲದ ಕಣ್ಣುಗಳು ಬೇಕು ಎಂದು ಲೇಖಕರು ಹೇಳುತ್ತಾರೆ. ನಿಸರ್ಗದಲ್ಲಿರುವ ಚಿಕ್ಕ–ದೊಡ್ಡ ಜೇಡರ ಹುಳುಗಳು, ಪ್ರಕೃತಿಯಲ್ಲಿ ಮನುಷ್ಯನಷ್ಟೇ ಮುಖ್ಯವಾದ ಹುಳು ಎನ್ನುತ್ತಾರೆ. ಇವುಗಳನ್ನು ಮನುಷ್ಯ ಅರ್ಥಮಾಡಿಕೊಂಡರೆ ನಿಸರ್ಗದಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಸ್ಥಾನಮಾನ ಇರುವುದನ್ನು ಅರಿತುಕೊಳ್ಳಬಹುದು ಎಂಬ ವೈಜ್ಞಾನಿಕ ಸತ್ಯವನ್ನು ಮನವರಿಕೆ ಮಾಡಿಕೊಡುತ್ತಾರೆ.

ತೇಜಸ್ವಿಯವರ 'ಪರಿಸರದ ಕಥೆಗಳು' ಇದರಲ್ಲಿ ಹಾವುಗೊಲ್ಲರ ಎಂಕ್ಟ ಎಂಬ ಒಂದು ಲೇಖನವಿದೆ. ಅದರಲ್ಲಿ ಒಮ್ಮೆ ಸಾರ್ವಜನಿಕ ಪ್ರದರ್ಶನದ ಸಮಯದಲ್ಲಿ ದಾಸರ ಹಾವು ಎಂಕ್ಟನ ಮೈಮೇಲೆ ಹರಿದಾಡುತ್ತಾ ಚಲಿಸುತ್ತಿರುವಂತೆಯೇ ಅವನನ್ನು ತನ್ನ ಉಕ್ಕಿನ ಹಿಡಿತದಲ್ಲಿ ಸಿಕ್ಕಿಸಿಕೊಂಡು ಬಿಡುತ್ತದೆ. ಹಾವಿನ ಬಿಗಿಮುಷ್ಟಿಯಲ್ಲಿ ಸಿಕ್ಕಿಕೊಂಡಿರುವುದು ಅಲ್ಲಿ ಸುತ್ತಮುತ್ತ ನೋಡುತ್ತಾ ನಿಂತ ಜನಕ್ಕೆ ಗೊತ್ತಾಗುವುದೇ ಇಲ್ಲ. ಕೊನೆಗೆ ಉಸಿರೇ ನಿಲ್ಲುವ ಅರ್ಥದಲ್ಲಿ ಕೊನೆಯ ಪ್ರಯತ್ನವಾಗಿ ಹಾವಿನ ಪಟ್ಟಿಯನ್ನು ಚೂರಿ ಸಹಾಯದಿಂದ ಬರೆಯುತ್ತಾರೆ ಹಾಗೂ ನಿಧಾನವಾಗಿ ಸಡಲಿ ಎಂಕ್ಟ ಉಳಿದುಕೊಳ್ಳುತ್ತಾನೆ. ಇದನ್ನು ಸಂಕೇತವಾಗಿ ನೋಡಿದರೆ ಪರಿಸರವನ್ನು ವ್ಯಕ್ತಿ ಹೇಗೆ ಭಾವಿಸುತ್ತಿದ್ದಾನೆ ಎಂಬುದಕ್ಕೆ ಹೋಲಿಸಬಹುದು.

ಈ ಮೇಲಿನ ನಿರ್ದೇಶನವನ್ನು ನಿರೂಪಿಸಿದ ಕಾರಣವಿಷ್ಟೆ–ಸಾಮಾಜಿಕ ಪರಿಸರ ಮತ್ತು ವ್ಯಕ್ತಿ ಪ್ರಜ್ಞೆಯ ಸಂಘರ್ಷದಲ್ಲಿ ಪರಿಸರವು ದಾಸರ ಹಾವಿನಂತೆ ಮೆಲ್ಲಗೆ ಮೈಮೇಲೆ ಹರಿದಾಡುತ್ತದೆ. ಅವನನ್ನು ಉಸಿರುಗಟ್ಟಿಸಿ ಬಿಡುವುದನ್ನು ವ್ಯಕ್ತಿ ಪ್ರಜ್ಞೆ ಅರ್ಥೈಸಿಕೊಂಡು ಆ ಪರಿಸರವನ್ನು ಬಿಟ್ಟು ವ್ಯಕ್ತಿನಿಷ್ಠ ನೆಲೆಯಲ್ಲಿ ತನ್ನದೇ ಬದುಕನ್ನು ಕಂಡುಕೊಳ್ಳುವ ಹೊಸ ಧೋರಣೆಯೊಂದು ರೂಪಿತವಾಗುತ್ತಿರುವುದು ಕಾಣಿಸುತ್ತದೆ.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ತೇಜಸ್ವಿಯವರ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಪರಿಸರ ಪ್ರಜ್ಞೆ, ಸಾಮಾಜಿಕ ಸಮಸ್ಯೆಗಳು ಹಾಗೂ ವಿಜ್ಞಾನದ ಬಗೆಗಿನ ವಿಷಯಗಳನ್ನು ಹಾಸ್ಯ ಮತ್ತು ಕುತೂಹಲಕಾರಿಯಾಗಿ ಚಿತ್ರಿಸಿದ್ದಾರೆ. ಜೀವವಿಕಾಸ, ವೈಜ್ಞಾನಿಕ ದೃಷ್ಟಿಕೋನ, ಪ್ರಕೃತಿ ವಿಸ್ಮಯತೆ, ನಿಗೂಢತೆ, ಪರಿಸರದಲ್ಲಿ ಸಿಗುವಂತಹ ಗಿಡಮೂಲಿಕೆಯ ಪರಿಣಾಮಕಾರಿ ವೈದ್ಯತೆ, ಆಯುರ್ವೇದದ ಮಹತ್ವ, ತಂತ್ರಜ್ಞಾನದ ಬೆಳವಣಿಗೆಯಿಂದ ಆಗುತ್ತಿರುವ ಪರಿಸರ ನಾಶ ಮುಂತಾದ ಸೂಕ್ಷ್ಮತೆಯ ಬಗ್ಗೆ ಇವರ ಕೃತಿಗಳಲ್ಲಿ ಅನಾವರಣಗೊಂಡಿರುವುದು ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು :**

1. ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಬದುಕು ಬರಹ : ಕರೀಗೌಡ ಬೀಚನಹಳ್ಳಿ, ಧರಣಿ ಪ್ರಿಂಟರ್ಸ್, ಬೆಂಗಳೂರು–10
2. ಪರಿಸರದ ಕತೆ(1991) : ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ ಸರಸ್ವತಿಪುರಂ, ಮೈಸೂರು
3. ಕರ್ವಾಲೋ (1980): ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಸರಸ್ವತಿಪುರಂ–ಮೈಸೂರು.
4. ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು(1993): ಕೆ. ಪಿ. ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಸರಸ್ವತಿಪುರಂ–ಮೈಸೂರು.
5. ಪೆದ್ದು ಚೆರುವಿನ ರಾಕ್ಷಸ (ಕಾಡಿನ ಕಥೆಗಳು)1993: ಕೆ. ಪಿ. ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಸರಸ್ವತಿಪುರಂ–ಮೈಸೂರು.
6. ಕಿರಿಯರಿಗಾಗಿ ಪರಿಸರ (1991) ಬೇರೆಯವರೊಡನೆ: ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ, ಸರಸ್ವತಿಪುರಂ–ಮೈಸೂರು.
7. ಏಕ–ಅನೇಕ : ಡಾ. ಎಚ್. ಶಶಿಕಲಾ, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು